the Director of Public Instruction; and

the Head of the Department for the subject concerned when an appointment for that subject is made.

The Registrar shall *ex-officio* be the Secretary to the Board.

(3) The Vice-Chancellor shall be competent to make appointments of ministerial and other staff of the University.

(4) The decisions of the Board and in such cases as may be prescribed by the Chancellor, the decision of the Vice-Chancellor shall not have effect unless approved by the Chancellor; thereafter, every such decision shall be final and shall not be called in question in any manner."

The motion was adopted.

Mr. SPEAKER.—The question is:

"That Clause 26 as amended, stand part of the Bill.

The motion was adopted.

Clause 26, as amended, was added to the Bill.

Mr. SPEAKER.—Clause 1, Title and Preamble. The question is:

"That Clause 1 the Title and the Preamble stand part of the Bill."

The motion was adopted.

There is one lacuna I observe. Clause 21 should be amended. It will be merely consequential.

Motion to pass.

Sri A. G. RAMACHANDRA RAO.—Sir, I move:

"That the Mysore University Bill, 1956, as amended, be passed."

In moving this motion, I must thank all the members of the House for the attention that they have bestowed in shaping this Bill and the care that they have taken, particularly the Members of the Opposition whose vehement and bitter criticism has helped us to put it in the best form that was possible. This is one of the few measures for which in spite of the heated discussion, there has been unanimity and harmony. I should also like to bring it to the notice of this House that though there was voting, there was never a poll on any clause. Thus, Sir, it is with the unanimous will of this House and goodwill of the members that this Act is being placed on the Statute Book and I thank the Hon'ble Members for the good work that has been recorded in passing this Bill, Sir.

Sri Mulka GOVINDA REDDY.—Sir, before voting, I want one clarification. I want to know whether this measure is going to come into force before the end of this month?

Sri A. G. RAMACHANDRA RAO.—That we are considering.

Mr. SPEAKER.—The question is:

"That the Mysore University Bill, 1956, as amended, be passed."

The motion was adopted.

MYSORE CITY AND TOWN MUNICIPALITIES (SECOND AMENDMENT) BILL, 1956.

*Sri T. CHANNAIAH (Minister for Local Self-Government and Public Health).—Sir, if the House agrees, with your kind permission, I want to lay on the Table and take up the Mysore City and Town Municipalities (Second Amendment) Bill, 1956, which has been passed by the Mysore Legislative Council today.

Mr. SPEAKER.—Yes, you can move the consideration motion.

Motion to consider.

Sri T. CHANNAIAH.—Sir, I move:

"That the Mysore City and Town Municipalities (Second Amendment) Bill, 1956, as passed by the Legislative Council, be taken into consideration."

Sir, this is a very simple measure. Previously according to the existing

(SRI T. CHANNIAH.)

City and Town Municipalities Act, the system of election to the Municipal Councils was by single member constituency. There was a lot of Complaints from the various Municipal councils that in the recent elections to the Town Municipal Councils corruption etc., have crept in. They are now urging a change into plural member constituency, and the Chief Minister in the last Budget Session said, Sir, that the Hon'ble Members brought to the notice of the Government that this system of election from a single member constituency should be done away with. After considering carefully the request of some of the Hon'ble Members both in this House and the Legislative Council, Government have brought this measure to enable members in each constituency being not less than three and not more than five. This enables the Municipal Councils to form bigger constituencies. Number of voters may vary from one thousand to two or three thousand dependent upon the number of voters in each town.

I request the approval of this House for this amendment.

Mr. SPEAKER.—Motion moved:

"That the Mysore City and Town Municipalities (Second Amendment) Bill, 1956, as passed by the Legislative Council, be taken into consideration."

Sri Mulka GOVINDA REDDY (Chitaldrug).—I would like to know whether the voting will be by the method of distributive voting or cumulative voting.

ಶ್ರೀ ಟಿ. ಚನ್ನಯ್ಯ.—ಡಿಸ್ಟ್ರಿಬ್ಯೂಟಿವ್ ವೋಟಿಂಗ್ ಪ್ರಕಾರ. Single transferable vote ಪ್ರಕಾರವಾದರೆ ಪ್ರತಿಯೊಂದು ಮುನಿಸಿಪಾಲಿಟಿಯಲ್ಲಿಯೂ ಕೂಡ ಎಲ್ಲರೂ ವಿದ್ಯಾವಂತರಾಗಿರುವುದಿಲ್ಲ. ಆದುದರಿಂದ ಆ ಪದ್ಧತಿ ಇರುವುದಿಲ್ಲ. ಓಟರುಗಳಿಗೆ ಅನುಕೂಲವಾಗಲು ಮತ್ತು ಎಲ್ಲರೂ ಓಟುಮಾಡಲು distributing voting system ಇನ್ನು ಮುಂದೆ ಇರುತ್ತದೆ.

***Sri Mulka GOVINDA REDDY.**—Sir, the Statement of Objects and Reasons reads as follows:

"The City and Town Municipalities at present contemplate election to the Municipal Councils from single member constituencies. It is considered desirable to have plural member constituencies for these elections, the number of members for each constituency being not less than three and not more than five. Hence this Bill."

After having had experience of elections and the way in which they were conducted in most of the municipalities in Mysore State, there was a unanimous uproar that the present system of election to the Municipal Councils in Mysore State should undergo a radical change. Everywhere the voters did not exercise their vote according to their will. It is common knowledge that all corrupt practices were resorted to. Those that did not exercise their vote happened to be those that were a little bit educated. Those that exercised their vote did not do so without resorting to corrupt practices or selling their vote in the open market. Sometimes these people exercised their vote by taking money and sometimes these voters brought the ballot papers from the polling booths and handed over these ballot papers to the candidates or their agents. Of course that does not speak well of the competence of the Government and their advisers who conducted these elections. These corrupt practices to a certain extent should have been put down if only the officers that were responsible for conducting these elections were efficient, were competent and were fair-minded. The officers can prevent corruption to a certain extent and even if the officers cannot prevent the taking of money, they can certainly prevent voters from taking away the ballot papers from the polling booth.

Sri B. N. BORANNA GOWDA (Belur).—Is it possible to take away the ballot papers ?

Sri Mulka GOVINDA REDDY.—Some methods should have been evolved. Otherwise there will be no need for it. I agree that the present amendment that is before us says that the constituencies that are going to be

formed for municipalities will be plural member constituencies where the minimum number will be three and the maximum five. Thereby the number of voters that used to exercise the votes in a particular constituency will be increased, sometimes trebled and sometimes would be multiplied by five. It means that an individual candidate even in co-operation with other candidates that contest in a particular constituency where the number is three or five, may not be in a position to buy the votes and get himself along with others elected to the municipality. To that extent, this is a welcome measure. I therfore support the amendment that has been placed before us.

*ಶ್ರೀ ಆರ್. ಅನಂತರಾಮಕ್ (ಚಾಮರಾಜ ಪೇಟೆ).—ಸಭಾಪತಿಗಳೆ, ಈ ಮಸೂದೆ ಬಹಳ ಉತ್ತಮವಾದುದೂ ಮತ್ತು ಕಾಲಾತೀತವಾದುದೂ ಆಗಿದೆ ಹಿಂದೆ ಮುನಿಸಿಪಾಲಿಟಿಗಳಿಗೆ ಜನರಲ್ ಎಲೆಕ್ಷನ್ ಆದಾಗ ನಾನು ಹಾಸನಕ್ಕೆ ಮತ್ತು ಸಾಗರ ಟೌನಿಗೆ ಬೇರೆ ಕೆಲಸದ ಮೇಲೆ ಹೋಗಿದ್ದೆ. ಆಗ ಅಲ್ಲಿ ಜನರು ಸೇರಿದ್ದಾಗ ಓಟು ಎಷ್ಟರಮಟ್ಟಿಗೆ ಖರೀದಿಯಾಗುತ್ತಿತ್ತೆಂಬುದನ್ನು ನೋಡಿ ಬಹಳ ಆಶ್ಚರ್ಯಪಟ್ಟೆ. ಒಂದು ಸಿಂಗಲ್ ಮೆಂಬರ್ ಕಾನ್ಸ್ಟಿಟ್ಯೂಯೆನ್ಸಿಯಲ್ಲಿ 20-25 ಜನ ಓಟುಮಾಡಿದರೆ ಇಬ್ಬರು ಚುನಾವಣೆಗೆ ನಿಂತಿದ್ದರೆ ಓಟಿನ ಬೆಲೆ 10-15 ರೂಪಾಯಿಗಳವರೆಗೆ ಹೋಗಿದೆ. ಇದರಿಂದ ಹಣವಂತರಿಗೆ ಅನುಕೂಲ, ಹಣವಿಲ್ಲದಿರುವವರು ಚುನಾಯಿತರಾಗಿ ಬರಲು ಸಾಧ್ಯವಿಲ್ಲ. ಎಲ್ಲಾ ಟೌನುಗಳಲ್ಲೂ ಇದೇ ರೀತಿ ಗಲಾಟೆಯಿದೆ. ಮಾನ್ಯ ಸದಸ್ಯರು ಲೋಪದೋಷಗಳನ್ನು ಗಮನಕ್ಕೆ ತಂದಿದ್ದಾರೆ. ಅಧ್ಯಕ್ಷರ ಚುನಾವಣೆಯಲ್ಲೂ ಬಹಳ ಅನ್ಯಾಯ, ಪೈಪೋಟಿ ನಡೆಯುತ್ತಿದೆ; ಇನ್ನೂರು ರೂಪಾಯಿಗಳಿಂದ ಒಂದು ಸಾವಿರ ರೂಪಾಯಿಗಳವರೆಗೂ ಖರ್ಚಾಗುತ್ತಿದೆ. ಇದು ಅನ್ಯಾಯ. ಮೈಸೂರು ಬೆಂಗಳೂರು ಇಂಥ ದೊಡ್ಡ ನಗರಗಳಲ್ಲಿ ಒಂದು ಕಾನ್ಸ್ಟಿಟ್ಯೂಯೆನ್ಸಿಗೆ ಎರಡು ಸಾವಿರ ಜನ ಓಟುದಾರರಿರುತ್ತಾರೆ; ಲಂಚ ರುಷವತ್ತುಗಳಿಗೆ ಅವಕಾಶ ಕಡಿಮೆ; ಇಬ್ಬರು ಅಥವಾ ಮೂರು ಮಂದಿ ಚುನಾವಣೆಗೆ ನಿಂತರೆ ಓಟುಗಳು ಹಂಚಿ ಹೋಗುತ್ತವೆ. ಆದ್ದರಿಂದ ಇರುವ ಲೋಪದೋಷಗಳನ್ನು ನಿವಾರಿಸಲು ಜನರ ಅಭಿಪ್ರಾಯದಂತೆ ಸರ್ಕಾರದವರು ಮಸೂದೆ ತಂದಿದ್ದಾರೆ. ಇದನ್ನು ಜಾರಿಗೆ ತರುವುದರಿಂದ ಲಂಚರುಷುವತ್ತೂ ನಿಲ್ಲುತ್ತದೆ ಮತ್ತು ಯೋಗ್ಯರೂ ಮತ್ತು ಜನಪ್ರಿಯರೂ ಚುನಾಯಿತರಾಗಿ ಬರುತ್ತಾರೆ. ಆದುದರಿಂದ ಈ ಮಸೂದೆಯನ್ನು ಎಲ್ಲರೂ ಸ್ವಾಗತಿಸುತ್ತಾರೆಂದು ನಂಬಿದ್ದೇನೆ.

*ಶ್ರೀ ಬಿ. ಹುಚ್ಚೇಗೌಡ (ತುರುವೇಕೆರೆ).—ಸ್ವಾಮಿ, ಈಗಿರುವ ಮುನಿಸಿಪಾಲಿಟಿಗಳ ಕಾನೂನಿನಲ್ಲಿ ಅನೇಕ ಲೋಪದೋಷಗಳಿದ್ದವು, ಈ ಮಸೂದೆಯು ಸ್ವಲ್ಪಮಟ್ಟಿಗೆ ಅವನ್ನು ನಿವಾರಣೆಮಾಡುತ್ತದೆ ಎಂಬುದು ನನ್ನ ಅಭಿಪ್ರಾಯ. ಓಟು ಮಾಡುವವರು ಓಟಿನ ಚೀಟಿಯನ್ನು ತೆಗೆದುಕೊಂಡು ಹೋಗುತ್ತಾರೆಂಬುದು ನಿಜ. ಚೀಟಿಯಲ್ಲಿ ಗುರುತು ಮಾಡಿ ಪೋಲಿಂಗ್ ಆಫೀಸರ ಮುಂದೆ ಪೆಟ್ಟಿಗೆಗೆ ಹಾಕಿದರೆ ಹೊರಕ್ಕೆ ತೆಗೆದುಕೊಂಡು ಹೋಗುವ ಅವಕಾಶ ತಪ್ಪಬಹುದು. ಮಲ್ಟಿಮೆಂಬರ್ ಕಾನ್ಸ್ಟಿಟ್ಯೂಯೆನ್ಸಿಗಳಲ್ಲಿ ಬ್ಯಾಲಟ್ ಪೇಪರಿನಲ್ಲಿ ಮಾರ್ಕ್‌ಮಾಡುವ ವ್ಯವಸ್ಥೆಯಿರುವುದರಿಂದ ಇರುವ ಲೋಪ ನಿವಾರಣೆಯಾಗುತ್ತದೆ. ಈಗ ಅಸೆಂಬ್ಲಿ ಚುನಾವಣೆಯಲ್ಲಿ ಪೆಟ್ಟಿಗೆ ಒಡೆದು ಓಟು ಕದಿಯುವುದಕ್ಕೆ ಅವಕಾಶವಿದೆ. ಇದನ್ನು ಪ್ರದರ್ಶಿಸಿದ್ದಾರೆ. ಈ ಮಸೂದೆ ಜಾರಿಗೆ ತರುವುದರಿಂದ ಈ ತರಹ ಕೈವಾಡವಿರುವುದೆಲ್ಲಾ ತಪ್ಪುತ್ತದೆ, ಬಹಳ ಮಟ್ಟಿಗೆ ಇರುವ ನ್ಯೂನತೆಗಳು ನಿವಾರಣೆಯಾಗುತ್ತವೆ. ಆದ್ದರಿಂದ ನಾನು ಈ ಮಸೂದೆಯನ್ನು ಅನುಮೋದಿಸುತ್ತೇನೆ.

*Sri J. MOHAMED IMAM (Jagalur).—I have not got much to say on this Bill. Along with my friends I welcome this measure. I am glad that Government have put forward this Bill as was suggested on a previous occasion. The main object of this Bill is to see that there is as little corruption as possible and people of character and worth are returned. With this object it is sought to enlarge the constituencies and every member that is elected should be a representative of as many people as possible that reside in that locality. The bigger the constituency, the fairer would be the election and the smaller the constituency, greater is the corruption. So, in the case of municipalities where the number is less than three or four thousand, the number of seats must be raised. Each constituency should have voters of not less than 5,000. I wish this provision is introduced. Government should take care while creating constituencies; otherwise, when they apply this three-member constituencies, there may be constituencies with a small population. For instance in Nyamathi the population is 3,000. If you divide it into 5 constituencies, each would have a population of only 600 and any candidate would be able to purchase votes. This could be avoided by making the number of voters as big as possible. While demarcating constituencies for smaller municipalities, care must be taken to see that the number of voters in each constituency will not be less than 1,000. For big municipalities three constituencies would be all right. I thank the Government for having brought this Bill forward. There may be other

(SRI J. MOHAMED IMAM.)

omissions and drawbacks in the Municipal Act and I hope Government may study that Act and bring forward other amendments also.

ಶ್ರೀ ಆರ್. ಮುನಿಸ್ವಾಮಯ್ಯ (ಬೆಂಗಳೂರು ಉತ್ತರ—ಅನುಸೂಚಿತ ಜಾತಿಗಳು).—ಸ್ವಾಮಿ, ಈಗ ತಂದಿರತಕ್ಕ ಮೈಸೂರು ಸಿಟಿ ಮತ್ತು ಟೌನ್ ಮುನಿಸಿಪಾಲಿಟಿಗಳ ಎರಡನೆಯ ತಿದ್ದುಪಡಿ ಮಸೂದೆಯನ್ನು ನಾನು ಸಮರ್ಥಿಸುತ್ತೇನೆ. ಇದುವರೆಗೆ ಮುನಿಸಿಪಾಲಿಟಿಗಳಲ್ಲಿ ನಡೆಯುತ್ತಿದ್ದ ಚುನಾವಣೆಗಳಲ್ಲಿ ಲಂಚ ರುಷುವತ್ತುಗಳು ಮತ್ತು ಅನೇಕ ದುಷ್ಕೃತ್ಯಗಳೇ ನಿದ್ದುವೋ ಅವನ್ನು ಈ ಮಸೂದೆಯು ತೊಡೆದು ಹಾಕುತ್ತದೆಂದು ನಂಬಿದ್ದೇನೆ. ಇದುವರೆಗೆ ಓಟು ಮಾಡುವ ವಿಧಾನ ನಡೆಯುತ್ತಿದ್ದ ರೀತಿಯಲ್ಲಿ ಒಳಕ್ಕೆ ಹೋಗಿ ಓಟು ಕೊಡುವವನು ಓಟುಕೊಡದೆ ಓಟಿನ ಚೀಟಿಯನ್ನು ಜೇಬಿನಲ್ಲಿಟ್ಟುಕೊಂಡು ಹೊರಗಡೆ ಬಂದು ಮರೆಯಲ್ಲಿ ಮಾರಿಕೊಂಡಂಥ ಉದಾಹರಣೆಗಳು ಬಹಳ ವಾಗಿವೆ. ಅಲ್ಲದೆ ಚಿಕ್ಕ ಚುನಾವಣಾ ಕ್ಷೇತ್ರಗಳಲ್ಲಿ ಒಂಟಿ ಮನುಷ್ಯನ ಚುನಾವಣಾ ಕ್ಷೇತ್ರದಲ್ಲಿ ಒಂದೊಂದು ಓಟಿಗೆ ಒಂದು ಸವರ್ಣ ಕೊಟ್ಟಂಥ ಉದಾಹರಣೆಗಳು ಸಹ ಇವೆ. ವಾಸ್ತವಿಕವಾಗಿ ನಡೆದಿದೆ. ಈಗ ಪ್ರತಿ ಚುನಾವಣಾ ಕ್ಷೇತ್ರದಲ್ಲೂ ಮೂರರಿಂದ ಐದು ಜನರವರೆಗೂ ಸದಸ್ಯರು ಇರ ಬೇಕೆಂದು ಈ ಮಸೂದೆಯಲ್ಲಿ ಹೇಳಿರುವುದು ಸ್ವಾಗ ತಾರ್ಹವಾಗಿದೆ. ಶ್ರೀ ಇಮಾಂರವರು ಹೇಳಿದ ಹಾಗೆ ಒಂದೊಂದು ಕ್ಷೇತ್ರದಲ್ಲೂ ಕನಿಷ್ಟಪಕ್ಷ ಒಂದುಸಾವಿರ ಓಟರುಗಳಿರುವಹಾಗೆ ವ್ಯವಸ್ಥೆ ಮಾಡಬೇಕು. ಚಿಕ್ಕ ಮುನಿಸಿಪಾಲಿಟಿಗಳಲ್ಲಿ ಊರೆಲ್ಲಾ ಸೇರಿ ಒಂದು ಕ್ಷೇತ್ರ ವಾದರೆ ಸಾಕು ಎಂದು ತೋರುತ್ತದೆ. ಇಷ್ಟು ಹೇಳಿ ಈ ಮಸೂದೆಯನ್ನು ಸಮರ್ಥನೆ ಮಾಡುತ್ತೇನೆ.

Sri S. SRINIVASA IYENGAR.—I can certainly understand the desire of the Government to convert single member constituency into larger constituencies in town municipalities. But, I am yet to be convinced of that purpose in cities. Mysore City has a population of 2½ lakhs. Voters would be as big as 1⅛ lakhs. There are about 40 Divisions. For 40 Divisions, the average voters would be 2,000. Suppose it is made a multi-member constituency. Then, the voting strength would be as much as 6,000 to 8,000. Is this not very unwieldy ? In respect of town municipalities this is perfectly correct; I entirely agree. But, in respect of cities I think Government can defer this amendment.

*ಶ್ರೀ ಎಸ್. ಗೋಪಾಲಗೌಡ (ಸಾಗರ-ಹೊಸನಗರ).—ಸ್ವಾಮಿ, ಸರ್ಕಾರದವರು ಮೈಸೂರು ಮುನಿಸಿಪಾಲಿಟಿಗಳಿಗೆ ಸಂಬಂಧಪಟ್ಟ ಒಕ್ಕಿಗೆ ತಿದ್ದು ಪಡಿಯನ್ನು ಸೂಚಿಸಿದ್ದಾರೆ. ಈ ಸಭೆಯ ಹಿಂದಿನ ಅಧಿವೇಶನದಲ್ಲಿ ಈ ವಿಷಯಕ್ಕೆ ಸಂಬಂಧಪಟ್ಟ ಚರ್ಚೆ ನಡೆದ ಕಾಲದಲ್ಲಿ ಈಗಿರತಕ್ಕ ನಣ್ಣ ನಣ್ಣ ಕಾರ್ಪೊರೇಷನ್ನುಗಳೇನಿವೆಯೋ ಅವುಗಳಲ್ಲಿ ಹೆಚ್ಚಿನ ಲೋಪದೋಷ ಗಳಿಗೂ ಮತ್ತು ಲಂಚರುಷುವತ್ತಿಗೂ ಅವಕಾಶವಿದೆ ಅದನ್ನು ತಿದ್ದುಪಡಿ ಮಾಡಬೇಕು ಎಂದು ನಾವು ಸೂಚನೆ ಮಾಡಿದ್ದೆವು. ಈ ತಿದ್ದುಪಡಿಯಿಂದ ಪೂರ್ಣ ವಾಗಿ ಮುನಿಸಿಪಾಲಿಟಿಗಳಲ್ಲಿ ಈಗಿರುವ ವ್ಯವಸ್ಥೆಯೆಲ್ಲ ಬದಲಾವಣೆ, ಡಿಪಿರ್ಜಗಳಿಗೆ ಸಂಬಂಧಪಟ್ಟಹಾಗೆ ಎಲ್ಲಾ ಮಾರ್ಪಾಡೂ ಆಗುತ್ತದೆ ಎಂದು ಹೇಳುವುದ ಕ್ಕಾಗುವುದಿಲ್ಲ. ಈ ಅನುಮಾನವಿದೆ. ಏಕೆಂದರೆ ಆಗಲೇ ಶ್ರೀಮಾನ್ ಶ್ರೀನಿವಾಸಯ್ಯಂಗಾರ್‌ರವರು ತೋರಿ ಸಿರುವ ಹಾಗೆ, ದೊಡ್ಡ ಪಟ್ಟಣಗಳಲ್ಲಿ, ಮೈಸೂರು, ದಾವಣಗೆರೆ, ಬಳ್ಳಾರಿ ಇಂಥ ದೊಡ್ಡ ಊರುಗಳಲ್ಲಿ, ಎಲ್ಲಿ ಹೆಚ್ಚಿನ ಜನಸಂಖ್ಯೆಯಿರುತ್ತದೋ ಅಲ್ಲಿ ಒಂದ ಕ್ಕಿಂತ ಹೆಚ್ಚಾಗಿ ಈಗಿರುವ ರೀತಿಯಲ್ಲಿ 'Not less than three and not more than five ಎಂದು ಮಾಡಿದರೆ ಆಗ ಅದು ದೊಡ್ಡ ಕ್ಷೇತ್ರವಾಗ ಬಹುದು ಎಂದು ಕಾಣುತ್ತದೆ. ಅದಕ್ಕೆ ಸಂಖ್ಯೆಯ ಮೇಲೆ ಏನಾದರೂ ಮಿತಿಯಿಡುವುದಕ್ಕೆ ಸಾಧ್ಯವಾದರೆ ಬಹುಶಃ ಅದರಿಂದ ಒಳ್ಳೆಯದಾಗುತ್ತದೆ. ಈಗಿರುವ ರೀತಿಯಲ್ಲಿ ಕೆಲವು ಐದು ಸಾವಿರಕ್ಕಿಂತ ಕಡಮೆ ಜನ ಸಂಖ್ಯೆಯಿರುವ ಪ್ರದೇಶಗಳೂ, ಮುನಿಸಿಪಾಲಿಟಿಗಳೂ ಮೈಸೂರು ಸಂಸ್ಥಾನದಲ್ಲವೆ, ಮುಂಬಯಿ ಅಥವಾ ಮದರಾಸಿನಲ್ಲಿ ಕದಮೆ ಜನಸಂಖ್ಯೆಯಿರುವ ಪಟ್ಟಣಗಳಿಗೆ ಗ್ರಾಮಪಂಚಾಯಿತಿಗಳಿವೆ. ವಿಲೇಜ್ ಪಂಚಾಯಿತಿ ಕಾನೂನು ಪ್ರಕಾರ ಅಲ್ಲ ಬೋರ್ಡ್‌ಇದೆ. ಮುಂದೆ ಕರ್ನಾಟಕ ಬಂದಾಗ, ಮೈಸೂರು ಹೊರಗಿನ ಪ್ರದೇಶ ಒಂದಾಗಿ ಹೊಸರಾಷ್ಟ್ರವಾದಾಗ ಮತ್ತೆ ನಾವು ಈ ಕಾನೂನನ್ನು ತಿದ್ದುಪಡಿ ಮಾಡಬೇಕಾಗು ತ್ತದೆ. ಏಕೆಂದರೆ ಅಲ್ಲಿ ಗ್ರಾಮಪಂಚಾಯಿತಿ ಬೋರ್ಡ್ ಇದೆ. ಅಲ್ಲಿ ಮುನಿಸಿಪಾಲಿಟಿಗಳಿಗಿಂತ ಹೆಚ್ಚು ಜನಸಂಖ್ಯೆ ಯಿರುವ ಊರುಗಳು ವಿಲೇಜ್ ಪಂಚಾಯಿತಿ ಬೋರ್ಡಾಗಿ ಇವೆ. ಅನೇಕ ಸಂದರ್ಭಗಳಲ್ಲಿ ನಮ್ಮ ಮುನಿಸಿಪಾಲಿಟಿಗಳಿಗಿಂತ ಚೆನ್ನಾಗಿ ಕೆಲಸವನ್ನು ಕೂಡ ಮಾಡುತ್ತಿವೆ.

3 P.M.

ಇನ್ನೊಂದು ಈ ವಿಷಯಕ್ಕೆ ಸಂಬಂಧಪಟ್ಟಹಾಗೆ ಮಾರ್ಕ್‌ಮಾಡತಕ್ಕ ಒಂದು ಕೆಲಸವಿದೆ; ಮತಚಲಾ ಯಿಸಿ 5 ಜನರನ್ನು ಆರಿಸಬೇಕೆಂದರೆ ಗುರುತನ್ನು ಹಾಕು ವುದು ಬಹಳ ಕಷ್ಟದ ಕೆಲಸವಾಗುತ್ತದೆ. ಆನೆ, ಕುದುರೆ, ಒಂಟೆ ಈ ಚಿತ್ರಗಳನ್ನ ನೋಡಿ ಗುರುತು ಮಾಡಬೇಕು. ಆಗ ಅಧಿಕಾರಿಗಳಿದ್ದು ಅನಕ್ಷರಸ್ಥರಿಗೆ ಮತ್ತು ತಿಳಿವಳಿಕೆ ಇಲ್ಲದಿರುವವರಿಗೆ ಸಹಾಯಮಾಡ ಬೇಕು. ಹೀಗೆ ಅವರಿಗೊಂದು ಸಹಾಯಮಾಡ ಬೇಕಾಗಿರುವಾಗ ನಮಗೆ ಗೊತ್ತಿರುವಂತೆ ಅನೇಕ ಸಂದರ್ಭಗಳಲ್ಲಿ ಅವರಿಗೆ ಆ ರೀತಿ ಸಹಾಯ ಸರಿಯಾಗಿ ದೊರೆಯುತ್ತಿಲ್ಲ. ಕೆಲವು ಇಂಥ ಅನಕ್ಷರಸ್ಥರು ಆ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಲು ಸಾಧ್ಯ ವಾಗುತ್ತಿಲ್ಲ. ಅವನ್ನು ತಿಳಿದು ಅಧಿಕಾರಿಗಳು ಅವರ ಮತಗಳನ್ನು ದುರುಪಯೋಗಪಡಿಸಿಕೊಂಡಿರುವ ಸಂದರ್ಭಗಳೂ ಇವೆ. ಇಂಥ ತೊಂದರೆಯನ್ನು ಪರಿ ಹರಿಸಲು ಮತ್ತು ಈ ಕಾರ್ಯಗಳು ನಿಷ್ಪಕ್ಷಪಾತವಾಗಿ ನಡೆಯುವಂತೆ ಮಾಡಲು ಒಂದು ಮಾರ್ಗ ಹುಡುಕಲೇ ಬೇಕು. ಈ ಮಾರ್ಕ್‌ಮಾಡುವ ಪದ್ಧತಿ ಸರಿಯಾಗಿಲ್ಲ. ಈ ದಿವಸ ಈ ಶಾಸನಸಭಾ ಓಟುಗಳೇ ಕೆಲವು ಕುಲಗೆಟ್ಟು ಹೋಗಿದ್ದವೆಂದು ಮೊನ್ನೆತಾನೆ ನಡೆದ ಒಂದು ಚುನಾವಣೆಯ ಸಂಬಂಧದಲ್ಲಿ ಗೊತ್ತಾಗಿದೆ. ಹೀಗಿರುವಾಗ ಇನ್ನು ಸಾರ್ವತ್ರಿಕವಾಗಿ ಮೈಸೂರು ಸಂಸ್ಥಾನಾದಾಮಳೆ ಇರುವ ಈ ಸ್ಥಳೀಯ ಸಂಸ್ಥೆಗಳ

ಆಡಳಿತ ಚೆನ್ನಾಗಿಲ್ಲ ಎನ್ನುವ ವಿಚಾರ ಬೇರೆ ಬಂದಿದೆ. ಈ ಅಂಶವನ್ನು ಆ ಸ್ಥಳೀಯ ಸಂಸ್ಥೆಗಳ ಮುಖ್ಯಾಧಿಕಾರಿಗಳೇ ಎರಡು ಕಡೆಗಳಲ್ಲಿ ತಮ್ಮ ಭಾಷಣದಲ್ಲಿ ತಿಳಿಸಿದ್ದಾರೆ. ಈ ಮೂಲ ಶಾಸನದಲ್ಲಿ ಅನೇಕ ನ್ಯೂನತೆಗಳಿರುವುದೇ ಇದಕ್ಕೆಲ್ಲಾ ಕಾರಣವೆಂದು ಹೇಳಬೇಕಾಗಿದೆ. ಉದಾಹರಣೆಗೆ ಈ ಹೊತ್ತಿನವರೆಗೂ ಸ್ಥಳೀಯ ಸಂಸ್ಥೆಗಳಿಗೆ ಸಂಬಂಧಪಟ್ಟಹಾಗೆ ಜಿಲ್ಲಾ ಬೋರ್ಡುಗಳಲ್ಲಿ ಮತ್ತು ಮುನಿಸಿಪಾಲಿಟಿಗಳಲ್ಲಿ ಅಧ್ಯಕ್ಷರುಗಳಿಗೆ ಸಂಬಳವನ್ನು ಏನು ಈ ಅಧ್ಯಕ್ಷರಿಗೆ ಮಾತ್ರ ಕೊಡಬೇಕೋ ಅಥವಾ ಉಪಾಧ್ಯಕ್ಷರಿಗೆ ಮಾತ್ರ ಕೊಡಬೇಕೋ ಇಲ್ಲವೇ ಈ ಎರಡು ಜನರಿಗೂ ಕೂಡ ಬೇಕೋ ಎನ್ನುವ ವಿಚಾರ ಖಚಿತವಾಗಿ ತೀರ್ಮಾನವಾಗಿಲ್ಲ. ಇದಿನ್ನೂ ಸಂದಿಗ್ಧದಲ್ಲೇ ಉಳಿದಿದೆ. ಹೀಗೆ ಹೇಳಬೇಕೆಂದರೆ ಇನ್ನೂ ಅನೇಕ ಲೋಪದೋಷಗಳಿವೆ. ಈ ಶಾಸನವನ್ನೇ ಸಮಗ್ರವಾಗಿ ತಿದ್ದುಪಡಿ ಮಾಡಬೇಕಾದ ಅಗತ್ಯವಿದೆ. ಇದು ಆದಷ್ಟು ಬೇಗ ಆಗಲೇಬೇಕು. ಆದರೆ ಈಗ ತಂದಿರತಕ್ಕ ತಿದ್ದುಪಡಿಕೂಡ ಸ್ವಾಗತಾರ್ಹವಾಗಿದ್ದರೂ ಈ ಮೂಲ ಶಾಸನದಲ್ಲಿ ಇನ್ನೂ ತಿದ್ದುಪಡಿಯಾಗಬೇಕಾದ ಅನೇಕ ಅಂತಹ ಗಳಿರುತ್ತವೆಂಬುದನ್ನು ಸರ್ಕಾರದವರ ಗಮನಕ್ಕೆ ತಂದು ನಾನು ಈಗ ಸಭೆಯ ಮುಂದಿರುವ ತಿದ್ದುಪಡಿಗೆ ನನ್ನ ಬೆಂಬಲವನ್ನು ಕೊಡುತ್ತೇನೆ.

*ಶ್ರೀ ಟಿ. ಚನ್ನಯ್ಯ.—ಸ್ವಾಮಿ, ಈ ಮಸೂದೆಯು ಮೇಲ್ಮನೆಯಲ್ಲಿ ಕೂಡ ಯಾರಿಂದಲೂ ವಿರೋಧವಿಲ್ಲದ ರೀತಿಯಲ್ಲಿ ಸರ್ವಾನುಮತದಿಂದ ಪಾಸಾಯಿತು. ಅದೇ ರೀತಿಯಾಗಿ ಈ ಕೆಳಮನೆಯಲ್ಲೂ ಸಹ ಎಲ್ಲ ಮಾನ್ಯ ಸದಸ್ಯರೂ ಸರ್ವಾನುಮತದಿಂದ ಈ ಮಸೂದೆಗೆ ತಮ್ಮ ಅನುಮತಿಯನ್ನಿತ್ತಿರುತ್ತಾರೆ. ಅದಕ್ಕಾಗಿ ನಾನು ಸರ್ಕಾರದ ಪರವಾಗಿ ತಮ್ಮೆಲ್ಲರಿಗೂ ನನ್ನ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ. ಕೆಲವು ಮಾನ್ಯ ಸದಸ್ಯರು ಒಂದೆರಡು ಸಲಹೆಗಳನ್ನೂ ಕೂಡ ಈ ಸಂದರ್ಭದಲ್ಲಿ ಸೂಚಿಸಿರುತ್ತಾರೆ. ಆ ಸಲಹೆಗಳನ್ನು ಸರ್ಕಾರದವರು ತಮ್ಮ ಗಮನದಲ್ಲಿಟ್ಟುಕೊಂಡಿರುತ್ತಾರೆ. ಆದರೆ ಇಲ್ಲಿ ಒಂದು ಅಂಶವನ್ನು ಈ ಮಾನ್ಯಸಭೆಯ ಗಮನಕ್ಕೆ ತರುವುದನ್ನು ನಾನು ಮರೆತಿದ್ದೇನೆ. ಈ ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಯುವ ಕಾಲದಲ್ಲಿ ಮತದಾರರು ತಮ್ಮ ಬ್ಯಾಲೆಟ್ ಪೇಪರುಗಳನ್ನು ಆ ಚುನಾವಣೆ ನಡೆಯುತ್ತಿರುವ ವೇಳೆಯಲ್ಲಿ ತಮ್ಮ ಕೈಗೆ ತೆಗೆದು ಕೊಂಡು ಆ ಬ್ಯಾಲೆಟ್ ಪೇಪರಿನಲ್ಲಿ ತಮಗೆ ಯಾರು ಬೇಕೋ ಅವರಿಗೆ ಓಟ್‌ಮಾಡಿ ಆ ಬ್ಯಾಲೆಟ್ ಪೇಪರುಗಳನ್ನು ಹಾಗೇ ಬಚ್ಚಿಟ್ಟುಕೊಂಡು ತೆಗೆದುಕೊಂಡು ಹೋಗಿ ಹೊರಗಡೆ ಬೇರೆಯವರ ಕೈಗೆ ಕೊಟ್ಟುಬಿಡುತ್ತಾರೆ. ಹೀಗೆ ಅನೇಕರಿಂದ ಈ ಬ್ಯಾಲೆಟ್ ಪೇಪರುಗಳನ್ನು ಕೂಡಿಸಿಕೊಂಡು ಕೆಲವರು ಅವುಗಳನ್ನೆಲ್ಲಾ ಒಂದೇಸಲಕ್ಕೆ ತೆಗೆದುಕೊಂಡುಹೋಗಿ ಪೆಟ್ಟಿಗೆಯಲ್ಲಿ ಹಾಕುತ್ತಿದ್ದಾರೆಂದು ದೂರುಗಳು ಬಂದಿವೆ. ಇದೇ ಅಭಿಪ್ರಾಯವನ್ನು ಆ ಮೇಲ್ಮನೆಯವರೂ ಕೂಡ ವ್ಯಕ್ತಪಡಿಸಿರುತ್ತಾರೆ. ಈ ತೊಂದರೆಯನ್ನು ತಪ್ಪಿಸಬೇಕೆಂದೇ ಈಗ ಪ್ರತಿಯೊಬ್ಬರೂ ಅವರವರ ಬ್ಯಾಲೆಟ್ ಪೇಪರನ್ನು ಅವರು ಕೈಗೆ ತೆಗೆದುಕೊಂಡಮೇಲೆ ಅದರಲ್ಲಿ ಮಾರ್ಕ್‌ಮಾಡಿ ಆ ಬ್ಯಾಲೆಟ್ ಪೇಪರನ್ನು ಅಲ್ಲಿರುವ ಪೋಲಿಂಗ್ ಅಧಿಕಾರಿಗಳ ಸಮಕ್ಷದಲ್ಲೇ ಅಲ್ಲಿರತಕ್ಕ ಪೆಟ್ಟಿಗೆಯೊಳಗೆ ಹಾಕುವಂತೆ ಮಾಡುವುದು ಬಹಳ ಚೆನ್ನಾಗಿದೆ ಎಂದು ಅನೇಕರು ಒಪ್ಪಿದ್ದಾರೆ. ಅದನ್ನು ನಾನೂ ಸಹ ಒಪ್ಪುತ್ತೇನೆ. ಹಾಗೆ ಮಾಡಿದರೆ ಈ ಓಟುಗಳನ್ನು ಮಾರಾಟಮಾಡಲು ಅವಕಾಶವಿರುವುದಿಲ್ಲ. ಈ ಬ್ಯಾಲೆಟ್ ಪೇಪರುಗಳನ್ನು ಆ ಪೋಲಿಂಗ್ ಆಫೀಸರ ಮುಂದೆಯೇ ಆ ಪೆಟ್ಟಿಗೆಯಲ್ಲಿ ಹಾಕುವಂತೆ ಏರ್ಪಾಡುಮಾಡಿದರೆ ಈ ಕರಪ್ಷನ್ ಪ್ರಾಕ್ಟೀಸಿಗೆ ಅವಕಾಶವಿರುವುದಿಲ್ಲ. ಹೀಗೆ ಮಾಡಬೇಕೆಂಬುದನ್ನು ನಾನೂ ಸಹ ಅನುಮೋದಿಸುತ್ತೇನೆ. ಇನ್ನು ಕೆಲವರು ಆ ಪೆಟ್ಟಿಗೆಯನ್ನು ಒಡೆದಾಗ ಓಟ್ಸ್ ಪೇಪರುಗಳನ್ನು ತೆಗೆದುಕೊಂಡುಹೋಗಿಬಿಡುತ್ತಾರೆಂದು ಕೆಲವರು ದೂರು ಹೇಳಿದರು. ಆದರೆ ಆ ತರಹೆ ನಡೆದಿರತಕ್ಕ ಸಂದರ್ಭಗಳು ಬಹುಶಃ ಎಲ್ಲಿಯೂ ಇರಲಾರವು. ಆ ರೀತಿ ನಡೆಯುವುದಕ್ಕೆ ಅವಕಾಶವೇಇಲ್ಲ. ಹಾಗೂ ಒಂದು ವೇಳೆ ಅಂಥ ಸಂದರ್ಭಗಳುಂಟಾದರೆ ಅದನ್ನು ಸರ್ಕಾರದವರ ಗಮನಕ್ಕೆ ತಂದರೆ ತಕ್ಷಣ ಆ ಬಗ್ಗೆ ಸೂಕ್ತ ಕಾರ್ಯಕ್ರಮಗಳನ್ನು ಕೈಗೊಳ್ಳಲು ಸರ್ಕಾರ ಸಿದ್ಧವಾಗಿದೆ. ಹಾಗೆ ನಡೆಯಲು ಅವಕಾಶವಿತ್ತ ಅಧಿಕಾರಿಗಳ ವಿರುದ್ಧ ಸೂಕ್ತ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುತ್ತದೆ. ಶ್ರೀ ಇಮಾಂರವರೂ ಮತ್ತು ಶ್ರೀ ಗೋಪಾಲಗೌಡರೂ ಈ ಚುನಾವಣೆ ಕ್ಷೇತ್ರಗಳ ಬಗ್ಗೆ ಪೋಲಿಂಗ್ ಸೆಂಟರುಗಳನ್ನು ಒಂದುಸಾವಿರಕ್ಕಿಂತ ಕಮ್ಮಿ ಮತದಾರರಿರುವ ವ್ಯಪ್ತಿಯಲ್ಲೂ ಕೂಡ ಮೂರಕ್ಕೆ ಕಡಮೆಯಿಲ್ಲದೆ ಐದಕ್ಕೆ ಜಾಸ್ತಿಯಿಲ್ಲದೆಇರುವ ಹಾಗೆ ವ್ಯವಸ್ಥೆ ಮಾಡಬೇಕೆಂದು ಸಲಹೆ ಮಾಡಿದ್ದಾರೆ. ಆದರೆ ಹಾಗೆ ಮಾಡುವುದು ಬಹಳ ಕಷ್ಟ. 3 000ಕ್ಕೆ ಒಳಗಿರುವ ಓಟುದಾರರ ಪ್ರದೇಶದಲ್ಲಿ ಅಥವ ನಗರದಲ್ಲಿ ಚುನಾವಣೆಗೆ ಐದು ಜನರು ನಿಲ್ಲಬಹುದು. ಆ ಐದು ಜನರಿಗೂ ಚುನಾವಣಾ ಕ್ಷೇತ್ರ ಒಂದೇ ಆಗಿರುತ್ತದೆ. ಆದರಿಂದ ಅಲ್ಲಿ ಈ ಬ್ಲಾಕ್‌ಸಿಸ್ಟಂ ಮಾಡಿದರೆ ಕೆಲವು ಕಡೆ ಜಾಸ್ತಿ ಜನ ಓಟುದಾರರಾಗುತ್ತಾರೆ. ಇನ್ನು ಕೆಲವು ಕಡೆ ಓಟುದಾರರು ಕಡಮೆಯಾಗುತ್ತಾರೆ. ಆದರೆ ಇಲ್ಲಿ ಏನು ಮಾಡುವುದಕ್ಕೂ ಆಗುವುದಿಲ್ಲ. ಆದರೆ ಈ ಬ್ಯಾಲೆಟ್ ಪೇಪರುಗಳ ಮಾರಾಟವನ್ನು ನಿಲ್ಲಿಸಬೇಕೆಂತಲೇ—ಆ ಉದ್ದೇಶಕ್ಕಾಗಿಯೇ ಇದನ್ನು ಹೀಗೆ ಕಡಮೆ ಮಾಡಲಾಗಿದೆ. ಹಣಗಾರರಿರುವ ಕಡೆಗಳಲ್ಲಿ ಕೆಲವರು ಓಟಿಗೆ ಒಂದು ರೂಪಾಯಿನಿಂದ ಹಿಡಿದು ಐದು ರೂಪಾಯಿಗಳವರೆಗೂ ಕೊಡುವುದಲ್ಲದೆ ಹೆಣ್ಣುಮಕ್ಕಳಿಗೆ ಚೀಟಿ ಬಟ್ಟೆ- ಸೀರೆ ಕೊಟ್ಟು ಓಟುಗಳನ್ನು ಕೊಳ್ಳುತ್ತಿದ್ದಾರೆ. ಅದನ್ನು ತಪ್ಪಿಸಬೇಕೆಂತಲೇ ಹೀಗೆ ಮಾಡಿದ್ದೇವೆ. ಇದನ್ನು ಸರ್ವರೂ ಈ ಸಭೆಯಲ್ಲಿ ಒಪ್ಪಿಕೊಂಡಿದ್ದಾರೆ. ಇನ್ನು ಈ ಪ್ರೆಸಿಡೆಂಟರು ಮತ್ತು ವೈಸ್‌ಪ್ರೆಸಿಡೆಂಟರುಗಳ ಸಂಬಳದ ಬಗ್ಗೆ ಏನೂ ತೀರ್ಮಾನ ಮಾಡಿಲ್ಲ ನೆಂದು ಶ್ರೀ ಗೋಪಾಲಗೌಡರು ಹೇಳಿದರು. ನಿಜ. ಆ ವಿಷಯದಲ್ಲಿ ಸರ್ಕಾರ ಈಗಾಗಲೇ ಖಚಿತವಾಗಿ ತೀರ್ಮಾನ ತೆಗೆದುಕೊಂಡಿದೆ. ಆ ಬಗ್ಗೆ ಮತ್ತೊಂದು ತಿದ್ದುಪಡಿಯನ್ನು ಆ ಇಬ್ಬರ ವೇತನದ ಬಗ್ಗೆ ಮಂಡಿಸಬೇಕೆಂಬ ಅಭಿಪ್ರಾಯವಿದೆ ಈ ಮಸೂದೆಗೆ ಸರ್ವರೂ ತಮ್ಮ ಬೆಂಬಲ ನೀಡಬೇಕೆಂದು ಅರಿಕೆಮಾಡಿಕೊಳ್ಳುತ್ತೇನೆ.

Mr. SPEAKER.—The question is :

"That the Mysore City and Town Municipalities (Second Amendment) Bill, as passed by the Legislative Council, 1956, be taken into consideration."

The motion was adopted.

Mr. SPEAKER.—Clauses.

*ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—ಸ್ವಾಮಿ, ನಾನಾಗಲೇ ನನ್ನ ತಿದ್ದುಪಡಿಯನ್ನು ತರತಕ್ಕ ಅಗತ್ಯವೇನಿವೆ ಎನ್ನುವುದನ್ನು ನನ್ನ ಹಿಂದಿನ ಭಾಷಣದಲ್ಲಿ ಸೂಚಿಸಿರುತ್ತೇನೆ. ಆದರೆ ಮಾನ್ಯ ಮಂತ್ರಿಗಳೇನೋ ಒಂದು ಸಮಾಧಾನ ಹೇಳಿದ್ದಾರೆ. ಈ ಗ್ರಾಮಗಳ ಕ್ಷೇತ್ರವನ್ನು ದೊಡ್ಡದು ಮಾಡಬೇಕೆಂಬ ವಿಚಾರದಲ್ಲಿ ನನ್ನ ಅಭ್ಯಂತರವೇನೂ ಇಲ್ಲ. ಸರ್ಕಾರದವರು ಆ ಪೌರರ ಹಕ್ಕುಭಾಧ್ಯತೆಗಳನ್ನು ಕಾಪಾಡುವುದಕ್ಕಿಂತಲೂ ಹೆಚ್ಚಾಗಿ ಅವರಿಗೆ ಅಗತ್ಯವಿರುವ ಅನುಕೂಲತೆಗಳನ್ನು ಕಲ್ಪಿಸಿಕೊಡಬೇಕಾದದ್ದು ಅತಿ ಮುಖ್ಯವಾದ ವಿಚಾರ; ಮತ್ತು ಇದೇ ಒಂದು ಹೆಚ್ಚಿನ ವಿಷಯ. ಆದರೆ ಪ್ರತಿನಿಧಿಗಳು ಜಾಸ್ತಿಯಾಗಿ ಬರಬೇಕಾದರೆ ಓಟುದಾರರೂ ಕೂಡ ಜಾಸ್ತಿ ಇರಲೇಬೇಕು. ಅನೇಕ ಗ್ರಾಮಗಳಲ್ಲಿ ಈ ಓಟ್‌ದಾರರ ಸಂಖ್ಯೆ ಬಹಳ ಕಡಿಮೆಯಾಗಿರುತ್ತದೆ. ಆಗ ನುತ್ತಮುತ್ತಲಿರುವ ಹಳ್ಳಿಗಳನ್ನು ಸೇರಿಸಬೇಕಾಗುತ್ತದೆ. ಈ ದೊಡ್ಡದೊಡ್ಡ ಪಟ್ಟಣಗಳಲ್ಲದ್ದಂತೆ ಹಳ್ಳಿಗಳಲ್ಲಿ ಯಾವ ರಾಜಕೀಯವೂ ಇರುವುದಿಲ್ಲ. ಆದರೆ ಈ ಸ್ಥಳೀಯ ಸಂಸ್ಥೆಗಳ ವಿಚಾರದಲ್ಲಿ ಆ ರಾಜಕೀಯದ ಪ್ರಶ್ನೆಯೇ ಬರುವುದಿಲ್ಲ. ಈ ಸ್ಥಳೀಯ ಸಂಸ್ಥೆಗಳನ್ನು ಸ್ಥಾಪನೆ ಮಾಡಿರುವ ಉದ್ದೇಶ ಜನರ ಅನುಕೂಲತೆಗಳಿಗಾಗಿಯೇ ಹೊರತು ರಾಜಕೀಯಕ್ಕಾಗಿ ಅಲ್ಲ. ತಾವೀದಿವಸ ಒಂದೊಂದು ಚುನಾವಣಾ ಕ್ಷೇತ್ರಕ್ಕೆ ಆರು ಸಾವಿರದಿಂದ ಎಂಟು ಸಾವಿರದವರೆಗೆ ಜನರಿರುವಂತೆ ಒಂದು ಏರ್ಪಾಡನ್ನು ಮಾಡಿಬಿಟ್ಟರೆ ಹೆಚ್ಚು ಜನರು ಆರಿಸಿಬರುವ ಪ್ರದೇಶಕ್ಕೆ ಅವರಿಗೆ ಏನೇನು ಅನುಕೂಲತೆಗಳು ಮತ್ತು ಸೌಕರ್ಯಗಳು ಬೇಕೋ ಅವುಗಳನ್ನು ಅವರು ಮಾಡಿಕೊಳ್ಳುತ್ತಾರೆ. ಆದರೆ ಅದರಂತೆ ಅವರು ಇತರ ಭಾಗಗಳಿಗೂ ಅನುಕೂಲ ಮಾಡುತ್ತಾರೆಂಬುದನ್ನು ಹೇಗೆ ಒಪ್ಪಿಕೊಳ್ಳುವುದು? ಈ ದಿವಸ ನಮ್ಮ ದೇಶದಲ್ಲಿರತಕ್ಕ ಎರಡು ದೊಡ್ಡ ಮುನಿಸಿಪ್ಯಾಲಿಟಿಗಳು ಮೈಸೂರು ಮತ್ತು ದಾವಣಗೆರೆಗಳಲ್ಲಿ ಮಾತ್ರ ಇರುತ್ತವೆ. ಅಲ್ಲಿ ಪ್ರತಿಯೊಂದು ಸೆಂಟರಿಗೂ 2000ಕ್ಕೆ ಮೇಲ್ಪಟ್ಟ ಓಟರ್ಸ್ ಇರುವುದರಿಂದ ಅಲ್ಲಿಂದ ಆರಿಸಿಬರತಕ್ಕವರು ಬೇಹುಷಾರಾಗಿರುವುದಕ್ಕೆ ಸಾಧ್ಯವಿಲ್ಲ. ಅಂಥ ಕಡೆಗಳಲ್ಲಿ ಆರಿಸಿಬರುವ ಜನರಿಗೆ ಯಾವತ್ತೂ ಈ ಪೌರನಭೆಗಳ ಆಡಳಿತವನ್ನು ಚೆನ್ನಾಗಿ ನಡೆಸಬೇಕೆಂಬ ಶ್ರದ್ಧೆ ಅವರಲ್ಲಿರುತ್ತದೆ. ಸರ್ಕಾರದವರ ಉದ್ದೇಶವಾದರೂ ಕೂಡ ಸರಿಯಾದಂಥ ಯೋಗ್ಯರಾದಂಥ ಸದಸ್ಯರುಗಳು ಪೌರನಭೆಗೆ ಆರಿಸಿಬಂದರೆ ಅವುಗಳ ಆಡಳಿತ ದಕ್ಷತೆಯಿಂದ ನಡೆಸಲು ಸಾಧ್ಯವಾಗುತ್ತದೆ ಎಂಬುದೇಆಗಿದೆ. ಆದರೆ ಈ ದಿವಸ ಹಾಗೆ ಆಗುತ್ತಿಲ್ಲ. ಹಳ್ಳಿಗಳಲ್ಲಿ ಕ್ಷೇತ್ರ ಚಿಕ್ಕದು. ಆದರೆ ಪಟ್ಟಣಗಳ ವಿಷಯ ಹಾಗಿಲ್ಲ. ಪಟ್ಟಣದಲ್ಲಿ ರಾಜಕೀಯ ಕ್ಷೇತ್ರಗಳೂ ಇರುತ್ತವೆ. ಆದರೆ ಈ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಆ ರಾಜಕೀಯಕ್ಕೆ ಅವಕಾಶವೇಇಲ್ಲ. ಪ್ರತಿಯೊಂದು ಬ್ಲಾಕಿನವರೂ ತಮ್ಮ ಅನುಕೂಲಗಳೇನು, ತಮಗೇನು ಸೌಕರ್ಯಗಳಾಗಬೇಕು, ತಾವು ಸುಖವಾಗಿ ಶಾಂತಿಯಿಂದಿರಬೇಕಾದರೆ ಏನೇನು ಅಗತ್ಯವಿರುತ್ತದೆ ಎನ್ನತಕ್ಕ ವಿಚಾರಗಳು ಅಲ್ಲಿ ಬರಬಹುದೇಹೊರತು ರಾಜಕೀಯಕ್ಕೆ ಅವಕಾಶವೆಲ್ಲಿದೆ? ಪಟ್ಟಣಗಳಲ್ಲಾದರೂ ಹತ್ತು ಸಾವಿರ ಓಟುದಾರುಗಳಿರುವ ಕಡೆ ಹಣಗಾರರಿಗೆ ಅವಕಾಶವಿದೆಯೇ ಹೊರತು ಬಡವನಿಗೆ ಚುನಾವಣೆಯಲ್ಲಿ ಗೆದ್ದುಬರಲು ಸಾಧ್ಯವಿಲ್ಲ. ಆರು ಎಂಟು ಸಾವಿರ ಜನಗಳಿರುವ ಪ್ರದೇಶದಲ್ಲಿ ಜನರಿಗೆ ಪ್ರಚಾರ ನಡೆಸಲು ಬಹಳ ಕಷ್ಟವಾಗುತ್ತದೆ. ಆದಾಗ್ಯೂ ಪಟ್ಟಣಗಳಲ್ಲೇನೋ ಈ ಕಷ್ಟ ಕಂಡುಬಂದಿಲ್ಲ. ಮೈಸೂರಿನಲ್ಲಿ ಚುನಾವಣೆಯಾಗಿ ಬಂದಿರತಕ್ಕ ಶ್ರೀ ಕೆ. ಪುಟ್ಟಸ್ವಾಮಿಯವರಿಗೆ ಏನು ಕಷ್ಟ ಉಂಟಾಗಿತ್ತು ಕೇಳಿ? ಅವರಿಗೇನೂ ಕಷ್ಟ ಕಂಡುಬಂದಿರುವುದಿಲ್ಲ. ಹೀಗೆ ಈ ಕಾರ್ಯ ಅನುಕೂಲವಾಗಿ ಜರುಗುತ್ತಿರುವ ಜಾಗದಲ್ಲಿ ಏಕೆ ಆ ಪದ್ಧತಿಯನ್ನು ತಾವೀಗ ಬದಲಾವಣೆ ಮಾಡುತ್ತೀರಿ? ಈ ಒಂದು ನನ್ನ ಅಭಿಪ್ರಾಯವನ್ನು ನಾನೀಗ ತಮ್ಮ ಮುಂದೆ ಇಡುತ್ತಿದ್ದೇನೆ.

*ಶ್ರೀ ಟಿ. ಚನ್ನಯ್ಯ.—ಅನೇಕ ಮಿತ್ರರು ಹೇಳುತ್ತಿದ್ದ ಹಾಗೆ ರಾಜಕೀಯ ಪಕ್ಷಗಳು ತಮ್ಮ ಇಷ್ಟಬಂದಂತೆ ಚುನಾವಣೆಯಲ್ಲಿ ಭಾಗವಹಿಸುವುದಕ್ಕೆ ಸಾಧ್ಯವಾಗುತ್ತದೆ ಎಂದು ಹೇಳಿ ಅಷ್ಟಾಗಿ ಕಂಡುಬರುತ್ತಿಲ್ಲ. ಯಾರು ದಕ್ಷರು, ಯೋಗ್ಯರಾದವರು ಇರುತ್ತಾರೆಯೋ ಅವರಿಗೇ ಹೆಚ್ಚಿನ ಅವಕಾಶ ಸಿಕ್ಕುತ್ತದೆ, ಅದರಲ್ಲಿಯೂ ನಿಸ್ವಾರ್ಥತೆಯಿಂದ ಸೇವೆ ಮಾಡತಕ್ಕವರು ಹಳ್ಳಿಯಲ್ಲೇ ಇರಲಿ, ಟೌನಲ್ಲೇ ಇರಲಿ ಅವರನ್ನು ಹುಡುಕಿಕೊಂಡುಹೋಗಿ ಕರೆದುಕೊಂಡುಬಂದು ಚುನಾವಣೆಗೆ ನಿಂತುಕೊಳ್ಳಿ, ಚುನಾಯಿತರಾಗಿ ಎಂದು ಹೇಳುತ್ತಾರೆ. ಅಂಥವರಲ್ಲದವರು ಚುನಾಯಿತರಾಗಿ ಬರುವುದಕ್ಕಾಗುವುದಿಲ್ಲ. ಕಾಲ ಬದಲಾವಣೆಯಾಗಿರುವುದರಿಂದ ನಿಸ್ವಾರ್ಥತೆಯಿಂದ ಸೇವೆ ಮಾಡುವವರು ಎಲ್ಲೇಇರಲಿ ಅಂಥವರನ್ನು ಚುನಾವಣೆಗೆ ನಿಂತುಕೊಳ್ಳಿ ಎಂದು ಹೇಳುತ್ತಾರೆ. ಆದ್ದರಿಂದ ಭಯಪಡಬೇಕಾಗಿಲ್ಲ. ಹಣಕಾಸಿನ ಬೆಂಬಲದಿಂದ ಚುನಾಯಿತರಾಗಿ ಬರಬೇಕಾಗಿದೆ ಎಂದು ಹೇಳುವುದು ಕಾಲ ಬದಲಾವಣೆ ಆದಹಾಗೆಲ್ಲಾ ಹೊರಟುಹೋಗುತ್ತದೆ. ನಿಸ್ವಾರ್ಥತೆಯಿಂದ ಕೆಲಸಮಾಡುವವರಿಗೆ ಹೆಚ್ಚಿನ ಪ್ರಾತಸ್ಯ ಬರಬೇಕು. ಡೆಮಾಕ್ರೆಸಿಯಲ್ಲಿ ಅದೇ ಒಳ್ಳೆಯದು ಎಂದು ನಾನು ನಂಬಿದ್ದೇನೆ. ನಿಸ್ವಾರ್ಥತೆಯಿಂದ ಸೇವೆ ಮಾಡುವವರು ಯಾವ ಕ್ಷೇತ್ರದಲ್ಲಾದರೂ ಚುನಾಯಿತರಾಗಿ ಬರುತ್ತಾರೆ. ಆದ್ದರಿಂದ ತಾವು ಭಯಪಡಬೇಕಾಗಿಲ್ಲ. ಈ ತಿದ್ದುಪಡಿಯನ್ನು ಒತ್ತಾಯಪಡಿಸಬಾರದು ಎಂದು ಹೇಳುತ್ತೇನೆ.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—ಆಗಬಹುದು ಸ್ವಾಮಿ, ವಾಪಸು ತೆಗೆದುಕೊಳ್ಳುತ್ತೇನೆ. ಮಾನ್ಯ ಸಚಿವರು ಇಷ್ಟೆಲ್ಲಾ ಹೇಳಿದ ಮೇಲೆ ನನಗೆ ಇರುವುದು ಅದೊಂದೇ!

Mr. SPEAKER.—Clauses 2 and 3 of the Bill.

The question is :

"That Clauses 2 and 3 of the Bill stand part of the Bill."

The motion was adopted.

Clauses 2 and 3 were added to the Bill.

Mr. SPEAKER.—The question is :

"That Clause 1, the Title and the Preamble stand part of the Bill."

The motion was adopted .

Clause 1, the Title and the Preamble were added to the Bill.

Motion to pass.

Sri T. CHANNAIAH.—Sir, I move:

"That the Mysore City and Town Municipalities (Second Amendment) Bill, 1956, as passed by the Legislative Council, be passed."

Mr. SPEAKER.—The question is:

"That the Mysore City and Town Municipalities (Second Amendment) Bill, 1956, as passed by the Legislative Council, be passed."

The motion was adopted.

Mr. SPEAKER.—Now the House will rise and meet at 4 O' Clock.

The House adjourned at Twenty Minutes past Three of the Clock and re-assembled at Four of the Clock.

[MR. DEPUTY SPEAKER in the Chair.]

PUBLIC ACCOUNTS COMMITTEE REPORT.

Motion to consider (continued.)

Mr. DEPUTY SPEAKER.—We shall resume the discussion on the Report of the Public Accounts Committee.

Sri H. SIDDAVEERAPPA.—Sir, I have heard with very great attention to the remarks made by the Hon'ble Members while discussing the Report of the Public Accounts Committee. I am one with them in agreeing with their observations that the recommendations of the Public Accounts Committee are meant to be acted upon by the Government. In fact, in our Constitution, a place of great importance is given to the Public Accounts Committee. The Committee have examined the case thoroughly. Generally, the Government have taken action on the recommendation of the Committee. One important point that arose out of the discussion was that due to the paucity of trained accounts in various departments, accounts as compared with the figures in the Accountant General's books did not tally. There is much force in that observation. But the Finance Department has passed an order that whenever any Head of a Department wants the aid of the Accounts staff, the State Accounts Department has to spare the services of trained accountants for such period as is found necessary. The Government also attach great importance to this aspect of the question. We have taken steps to evolve a training scheme for accounts hands in consultation with the Accountant General after studying the position in the new State. I hope we will be able to solve this problem as satisfactorily as possible at a very early date.

Much was said about the tractor service. From quite a long time, we have been receiving a number of complaints that the tractor service has not been functioning as efficiently as is expected. I called the Director of Agriculture just an hour back. I have come to know that the service conditions have very much improved.

Regarding the observation of the Hon'ble Member Sri Srinivasa Iyengar about the huge advance of Rs. 16.92 lakhs to multi-purpose co-operative societies, the Department has already been instructed to make efforts to see that the accounts are settled as early as possible. Regarding arrears in the Food Department, I know the Director of Food Supplies has taken very active steps to see that the objections are met at a very early date so that we may take steps to wind up the Department as soon as possible. I have been watching the report of the progress from month to month and every month the progress shown is satisfactory.

Regarding the accrual of large savings, there were certain reasons as to why those savings accumulated during the year under review. But now Heads of Departments have been clearly instructed to see that they do not ask for more grants than what they reasonably expect to spend during the year in which grants are made by the Legislature. I ag ee that in a proper system of budgeting there should be as far as possible very